ಹೊಸದನ್ನು ಕಲಿಯುವುದರಿಂದ ದೇಶವೂ ಮುಳುಗುವುದಿಲ್ಲ, ಭಾಷೆಯೂ ಕೆಡುವುದಿಲ್ಲ, ಸತ್ಸಂಪ್ರದಾಯವೂ ಅಳಿಯುವುದಿಲ್ಲ. ಅದರಲ್ಲಿ ಜೀವವಿಲ್ಲದ್ದು ಹೋಗಲಿ, ಬಿಡಿ. ಸಂಸ್ಕೃತವನ್ನು ಜೀರ್ಣಿಸಿಕೊಂಡು, ಇಂಗ್ಲಿಷನ್ನೂ ಜೀರ್ಣಿಸಿಕೊಂಡು ಉಳಿದಂತೆ ಉಳಿದು, ಕನ್ನಡವನ್ನು ಉಳಿಸಿ, ಬೆಳೆಸಿ! ಸಂಸ್ಕೃತದಲ್ಲಿಯೂ ಇಂಗ್ಲಿಷಿನಲ್ಲಿಯೂ ಸಿಕ್ಕದ್ದು ಹಿಂದಿಯಲ್ಲೇನಾದರೂ ಸಿಕ್ಕಿದರೆ ಅದನ್ನೂ ಕೊಳ್ಳಿ." ಇಲ್ಲಿ ಹಿಂದಿ ಅಂದರೆ ಹಿಂದಿಯಷ್ಟೇ ಎಂದೇನಲ್ಲ. ಜಗತ್ತಿನ ಯಾವ ಭಾಷೆಯಾದರೂ ಸರಿಯೇ ಅನ್ನುವರ್ಥದಲ್ಲಿ. ಈಗಂತೂ ಅದಕ್ಕೂ ರಾದ್ಧಾಂತ ಮಾಡಿ ಸಾಮಾಜಿಕ ಮಾಧ್ಯಮದಲ್ಲಿ ಟ್ರೋಲ್ ಮಾಡಿಯಾರು. ಶ್ರೀಯವರು ಅಂದೇ ಹಿಂದಿಯನ್ನು ಬೆಂಬಲಿಸಿದ್ದರೆಂದು. ಅದಿರಲಿ. ಶ್ರೀಯವರು ತಮ್ಮ ಭಾಷಣದಲ್ಲಿ ದಾಸ್ಯ, ಪರಭಿಕ್ಷೆ, ಸಂಪ್ರದಾಯ ಭಂಗ ಅನ್ನುವ ಟೀಕಾಶಬ್ದಗಳನ್ನು ಏಕೆ ಬಳಸಿದರು? ಅದಾಗಲೇ ಕನ್ನಡದಲ್ಲಿ ಅಂತಹ ಟೀಕೆಗಳು ಬಂದಿದ್ದವೇ? ಹಾಗೆ ಹೇಳುವುದಾದರೆ, ಶ್ರೀಯವರ ಆ ಭಾಷಣಕ್ಕೂ ಟೀಕೆಗಳು ಬಂದಿದ್ದವಂತೆ. ವಿಶೇಷವಾಗಿ, ಉತ್ತರ ಕರ್ನಾಟಕ ಭಾಗದಿಂದ. ಅಂತಹ ಟೀಕೆಗಳನ್ನೆಲ್ಲ ಎದುರಿಸುತ್ತಲೇ, ಅವಕ್ಕೆಲ್ಲ ದಿಟ್ಟವಾಗಿ ಉತ್ತರಿಸುತ್ತಲೇ ಹೋದದ್ದಕ್ಕೆ ಶ್ರೀಯವರಿಗೆ ಹಿಂದೆಯಿದ್ದವರಿಂದ ಹಿಡಿದು ನಂತರದ ಒಂದಿಡೀ ಶತಮಾನದಲ್ಲಿ ಸಾಹಿತಿಗಳನೇಕರು ಕನ್ನಡವನ್ನು ವಿಶಾಲವನ್ನಾಗಿಸಲು ಸಾಧ್ಯವಾಗಿದ್ದು. ಆ ವಿಶಾಲ ಮನೋಭಾವದಿಂದಲೇ ಪೂರ್ವ ಪಶ್ಚಿಮಗಳೆರಡರ ಜ್ಞಾನವನ್ನು ಎರಕ ಹೊಯ್ದು ಹೊಸಗನ್ನಡವನ್ನು ಬೆಳೆಸಿದ್ದು. ಸಾಹಿತ್ಯ, ವಿಚಾರ, ವಿಮರ್ಶೆಯೆಲ್ಲವನ್ನೂ ಮೈಗೂಡಿಸಿಕೊಂಡ ಆ ಕನ್ನಡ ಅರುಣೋದಯ, ನವೋದಯ, ಪ್ರಗತಿಶೀಲ, ನವ್ಯಗಳನ್ನು ಕಂಡು, ದಲಿತ-ಬಂಡಾಯದ ಹೊತ್ತಿಗೆ ಹೊಸ ದಿಗಂತದೆಡೆಗೆ ಹೊರಳಲಾರಂಭಿಸಿದ್ದು. ಈಗ ನನ್ನನ್ನು ಕಾಡುತ್ತಿರುವ ಪ್ರಶ್ನೆ, ಆಧುನಿಕ ಕನ್ನಡದ ಅತ್ಯಂತ ದೊಡ್ಡ ಸಂಪ್ರದಾಯಭಂಗ ಯಾವುದು? ಯಾರು ಮಾಡಿದ್ದು? ಯಾತಕ್ಕೆ ಮಾಡಿದ್ದು? ಯಾವ ಕಾರಣಕ್ಕಾಗಿ ಈಗ ಅದು ಮುಖ್ಯ?

**ಕನ್ನಡದಲ್ಲಿ ಇರುವುದೆಲ್ಲ ಗಟ್ಟಿಯಾದ ಸಾಹಿತ್ಯವೇನಲ್ಲ!**

ಕನ್ನಡ ಹುಟ್ಟಿದ ಕಾಲದಿಂದಲೂ ಸಂಪ್ರದಾಯಭಂಗ ಮಾಡಿಕೊಂಡೇ ಬಂದಿದೆ. ಹಾಗಿಲ್ಲದಿದ್ದರೆ, ವಚನ ಚಳವಳಿಯಂತಹ ಚಳವಳಿ ಸಾಧ್ಯವೇ ಆಗುತ್ತಿರಲಿಲ್ಲ. ಆದರೆ, ಅದಾದ ನಂತರ?

ಆಧುನಿಕ ಕನ್ನಡ ಕಾಲಘಟ್ಟದಲ್ಲಿ ಸಂಪ್ರದಾಯಭಂಗಕ್ಕೆ ತನ್ನದೇ ಆದ ಇತಿಹಾಸವಿದೆ. ಸಾಹಿತ್ಯ-ಸಂಸ್ಕೃತಿ-ವಿಮರ್ಶೆಗೆ ಸಂಬಂಧಿಸಿದಂತೆ ನೋಡುವುದಾದರೆ, ನನ್ನ ಚರ್ಚೆಗೆ ಮುಖ್ಯವೆನಿಸುವುದು ಚಾರಿತ್ರಿಕ ಕಾರಣಗಳಿಂದಾಗಿ ಶಿಕ್ಷಣದ ಮೂಲ ಹಕ್ಕನ್ನು ಬ್ರಾಹ್ಮಣ ಸಮುದಾಯ ಕಾದಿರಿಸಿಕೊಂಡು, 'ಆಧುನಿಕ ಸಾಹಿತ್ಯವೆಂದರೆ ಅದು ಬ್ರಾಹ್ಮಣರು ರಚಿಸಿದ ಸಾಹಿತ್ಯ, ಸಂಸ್ಕೃತಿಯೆಂದರೆ ಅವರ ಸಂಸ್ಕೃತಿ' ಎಂಬ ಸನ್ನಿವೇಶವಿದ್ದಾಗ, ಅದಕ್ಕೆ ಸಾಹಿತ್ಯದ ಮೂಲಕವೇ ದಿಟ್ಟ ಉತ್ತರ ನೀಡಿದ ಶೂದ್ರ ಸಮುದಾಯದ ಕುವೆಂಪು. ಹಾಗಾಗಿ, ನನಗೆ ತೋಚುವ ಹಾಗೆ, ಶ್ರೀಯವರ ಭಾಷಣದ ಎರಡು ದಶಕಗಳ ನಂತರ ಪ್ರಕಟವಾದ ಕುವೆಂಪು ಅವರ ನಾಟಕ 'ಶೂದ್ರತಪಸ್ವಿ,' ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೊದಲ ದೊಡ್ಡ ಸಂಪ್ರದಾಯಭಂಗ.

ವಾಲ್ಮೀಕಿ ರಾಮಾಯಣದ ಉತ್ತರ ಕಾಂಡದಲ್ಲಿ ಬರುವ ಶಂಬೂಕ ವಧೆಯ ಪ್ರಸಂಗವನ್ನು ಮಾರ್ಪಡಿಸಿ ವರ್ಣಸಂಘರ್ಷಕ್ಕೊಂದು ಹೊಸ ಆಯಾಮ ದೊರಕಿಸಿದ್ದು, 1970ರ ದಶಕದಲ್ಲಿ ಕರ್ನಾಟಕದಲ್ಲಿ ಘಟಿಸಿದ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಘಟನೆಗಳಿಗೆ ಮುನ್ನುಡಿ ಬರೆದಂತಿತ್ತು. ಆದರೆ, ಆ ಸಂಪ್ರದಾಯಭಂಗ ಸಾಹಿತ್ಯ ಸಂಸ್ಕೃತಿಗಷ್ಟೇ ಸೀಮಿತವಾಗಿತ್ತು ಅನ್ನುವುದನ್ನು ಮರೆಯಬಾರದು. ಹಾಗಿದ್ದಲ್ಲಿ, ಅದರ ನಂತರ ಅದಕ್ಕಿಂತ ದೊಡ್ಡ ಸಂಪ್ರದಾಯಭಂಗವನ್ನು ಮಾಡಿದ್ದು ಯಾರು? ಇಡೀ ಕನ್ನಡ ಸಾಹಿತ್ಯ ಸಂಸ್ಕೃತಿಯ ರಾಜಕಾರಣವನ್ನು ಒಂದು ವಾಕ್ಯದಲ್ಲಿ ಯಾರಾದರೂ ವಿಮರ್ಶೆಗೊಳಪಡಿಸಿದ್ದುಂಟೇ? ಇಡೀ ಕರ್ನಾಟಕ ಸಾಂಸ್ಕೃತಿಕ ಹಾಗೂ ರಾಜಕೀಯ ಚರಿತ್ರೆಯ ಅಡಿಪಾಯವನ್ನೇ ಅಲುಗಾಡಿಸಿದವರುಂಟೇ? ಎಂಬ ಪ್ರಶ್ನೆಗಳನ್ನು ಎಸೆದರೆ, ಸಿಗುವ ಉತ್ತರವೇನಾಗಿರಬಹುದು? ಕರ್ನಾಟಕ ಸಾಹಿತ್ಯ ಅಥವಾ ಸಾಂಸ್ಕೃತಿಕ ಚರಿತ್ರೆಯನ್ನು ತಿಳಿದುಕೊಂಡವರಿಗೆ ಉತ್ತರ ಕಷ್ಟವೇನಲ್ಲವೇನೋ. ಆದರದು ವಿವಾದಾಸ್ಪದ. ಕಾರಣ, ಅಂತಹ ಹೇಳಿಕೆ ಮಾಡಿದವರು ಕುವೆಂಪು ಅವರ ಹಾಗೆ ಸಾಹಿತಿಯೂ